**ಕರ್ನಾಟಕ ಸರ್ಕಾರ**

**ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-01**

**ಸಂಖ್ಯೆ:** DPI-CPI0C2-6(CCA)/39/2021/E-408880 **ದಿನಾಂಕ**: 15-03-2023

**-:ಜ್ಞಾಪನ:-**

**ವಿಷಯ:** ಶೂ ಮತ್ತು ಸಾಕ್ಸ್ ಖರೀದಿ ಪ್ರಕ್ರಿಯೆಗೆ ಸಂಬಂಧಿಸಿದಂತೆ ದೂರು ದಾಖಲಾಗುತ್ತಿರುವ ಬಗ್ಗೆ.

**ಉಲ್ಲೇಖ:** ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರ ಸುತ್ತೋಲೆ ಸಂಖ್ಯೆ: ಸಿಪಿಇ(1)/06/ಪಾದರಕ್ಷೆ(ಷೂ)-06/2022-23 ದಿನಾಂಕ: 20-08-2022.

*********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದಲ್ಲಿ ವಿದ್ಯಾರ್ಥಿಗಳಿಗೆ ನಿಗದಿತ ಸಮಯದಲ್ಲಿ ಶೂ ಮತ್ತು ಸಾಕ್ಸ್‌ಗಳ ಅನುದಾನವನ್ನು ಸಂಬಂಧಿಸಿದ ಬಿ.ಇ.ಓ ರವರು ಮರುಹಂಚಿಕೆ ಮಾಡಿ, ಉಪನಿರ್ದೇಶಕರು(ಆ) ರವರ ಜೊತೆ ಮೇಲ್ವಿಚಾರಣೆ ಮಾಡುವುದು. ಖರೀದಿ ಪ್ರಕ್ರಿಯೆಯಲ್ಲಿ ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರಿಗಾಗಲಿ, ಕ್ಷೇತ್ರಶಿಕ್ಷಣಾಧಿಕಾರಿಗಳಿಗಾಗಲಿ, ಇ.ಸಿ.ಓ, ಬಿ.ಆರ್.ಪಿ ಮತ್ತು ಸಿ.ಆರ್.ಪಿ ಗಳಾಗಲಿ ಯಾವುದೇ ಅಧಿಕಾರವನ್ನು ನೀಡಿಲ್ಲ. ಈ ವಿಚಾರದಲ್ಲಿ ಅಂದರೆ ಸರ್ಕಾರದ ಯೋಜನೆಯಾದ ಶಾಲಾ ಮಕ್ಕಳಿಗೆ ಸರ್ಕಾರದ ಬಜೆಟ್‌ನಿಂದ ಬಿಡುಗಡೆಯಾದ ಹಣದಲ್ಲಿ ಉಚಿತ ಶೂ ಮತ್ತು ಸಾಕ್ಸ್ ಖರೀದಿಯಲ್ಲಿ ಯಾವುದೇ ಜಿಲ್ಲಾ ಉಪನಿರ್ದೇಶಕರಿಗಾಗಲಿ, ಕ್ಷೇತ್ರಶಿಕ್ಷಣಾಧಿಕಾರಿಗಳಿಗಾಗಲಿ, ಇ.ಸಿ.ಓ, ಬಿ.ಆರ್.ಪಿ ಮತ್ತು ಸಿ.ಆರ್.ಪಿ ಗಳಾಗಲಿ ಹಸ್ತಕ್ಷೇಪ ಮಾಡದಂತೆ ಎಚ್ಚರಿಕೆ ನೀಡಲಾಗಿರುತ್ತದೆ.

ಹೀಗಿದ್ದಾಗ್ಯೂ, ಶೂ ಮತ್ತು ಸಾಕ್ಸ್ ಖರೀದಿ ಪ್ರಕ್ರಿಯೆಯಲ್ಲಿನ ಅವ್ಯವಹಾರದ ಕುರಿತು ಅನೇಕ ದೂರುಗಳು ದಾಖಲಾಗುತ್ತಿದ್ದು. ಶಾಲಾ ಮುಖ್ಯ ಶಿಕ್ಷಕರುಗಳಿಗೆ ನಿರ್ದಿಷ್ಟ ಕಂಪನಿಯ ಮೂಲಕವೇ ಶೂ ಮತ್ತು ಸಾಕ್ಸ್ ಖರೀದಿ ಮಾಡುವಂತೆ ಒತ್ತಾಯಿಸಿರುವುದು, ಈ ಖರೀದಿ ಪ್ರಕ್ರಿಯೆಯಲ್ಲಿ ಅಧಿಕಾರಿಗಳು ಹಸ್ತಕ್ಷೇಪ ಮಾಡುತ್ತಿರುವುದು ಕಂಡುಬಂದಿರುತ್ತದೆ.

KTPP ಕಾಯ್ದೆ / ನಿಯಮಗಳ ಅಡಿಯಲ್ಲಿ ವಿವರಿಸಿದಂತೆ ಸರಿಯಾದ ಸಂಗ್ರಹಣೆಯ ಕಾರ್ಯವಿಧಾನವನ್ನು ಅಕ್ಷರಶಃ ಅನುಸರಿಸುವಂತೆ ಹಾಗೂ ಉಲ್ಲೇಖಿತ ಸುತ್ತೋಲೆಯಲ್ಲಿ ಸೂಚಿಸಿರುವ ಮಾರ್ಗಸೂಚಿಗಳನ್ನು ರಾಜ್ಯದಲ್ಲಿನ ಎಲ್ಲಾ ಉಪನಿರ್ದೇಶಕರುಗಳು, ಕ್ಷೇತ್ರಶಿಕ್ಷಣಾಧಿಕಾರಿಗಳು ಕಡ್ಡಾಯವಾಗಿ ಪಾಲಿಸತಕ್ಕದ್ದು.

ಈ ರೀತಿಯ ಪ್ರಕರಣಗಳು ಮರುಕಳಿಸದಂತೆ ಎಚ್ಚರಿಕೆಯಿಂದ ಕ್ರಮವಹಿಸಲು ಸೂಚಿಸಿದೆ. ಒಂದು ವೇಳೆ ಈ ರೀತಿಯ ಕ್ರಮ ಮರುಕಳಿಸಿದಲ್ಲಿ ನಿಯಮಾನುಸಾರ ಶಿಸ್ತು ಕ್ರಮ ಜರುಗಿಸಲಾಗುವುದು ಎಂದು ತಿಳಿಸಿದೆ.

**ಡಾ.ವಿಶಾಲ್.ಆರ್., ಭಾ.ಆ.ಸೇ.,**
**ಆಯುಕ್ತರು**

**ಇವರಿಗೆ,**

1. ರಾಜ್ಯದಲ್ಲಿನ ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಉಪನಿರ್ದೇಶಕರುಗಳಿಗೆ ಸೂಕ್ತ ಕ್ರಮಕ್ಕಾಗಿ.
2. ರಾಜ್ಯದಲ್ಲಿನ ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಕ್ಷೇತ್ರಶಿಕ್ಷಣಾಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ

**ಪ್ರತಿಯನ್ನು,**

1.ನಿರ್ದೇಶಕರು [ಪ್ರಾಥಮಿಕ], ಆಯುಕ್ತರ ಕಛೇರಿ, ಸಾರ್ವಜನಿ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ ಬೆಂಗಳೂರು.

2.ಕಛೇರಿ ಪ್ರತಿ.